**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ</u>**

**ಓ.ಎಸ್. 205/2017**

**ಪಿ.ಡಬ್ಲ್ಯೂ.1 – ಮರಿರಾಜ**

**ಪ್ರಮಾಣೀಕರಿಸಿದ ದಿನಾಂಕ: 27.06.2022**

**<u>ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ : –</u>**

ಸಾಕ್ಷಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನಗೊಳಿಸಲಾಯಿತು.

ನಿ.ಪಿ.14 – ತಹಶೀಲ್ದಾರರು ನೀಡಿರುವ ಹಿಂಬರಹ
ನಿ.ಪಿ.15 – ದಿ: 29.07.2017ರ ಹಿಂಬರಹ
ನಿ.ಪಿ.16 – ದಿ: 28.10.2019ರ ಸುತ್ತೋಲೆಯ ದೃಢೀಕೃತ ನಕಲು
ನಿ.ಪಿ.17 – ದಿ: 22.07.2019ರ ಹಿಂಬರಹ
ನಿ.ಪಿ.18 – ಪ್ರಕರಣ ಸಂ.:929/1970–71ರ ಆದೇಶ ಪ್ರತಿ
ನಿ.ಪಿ.19 – ದಿ: 15.06.2019ರ ಅರ್ಜಿಯ ಸ್ವೀಕೃತಿ ಪ್ರತಿ
ನಿ.ಪಿ.20 – ದಿ: 02.03.2020ರ ಅರ್ಜಿಯ ಸ್ವೀಕೃತಿ ಪ್ರತಿ

**<u>ಪಾಟಿ ಸವಾಲು: 7 ರಿಂದ 9ನೇ ಪ್ರತಿವಾದಿಗಳ ಪರ ವಕೀಲರಿಂದ: –</u>**

ನಿ.ಪಿ.2ನ್ನು ನನ್ನ ತಂದೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.2ರಲ್ಲಿ ನನ್ನ ತಂದೆ ಮತ್ತು ನಾನು ಸದರಿ ದಾಖಲೆಯನ್ನು ಬರೆಸಿ ಸಹಿ ಹಾಕಿರುತ್ತೇವೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.2ನ್ನು ನಿಷ್ಪಾದಿಸಿದ ವರ್ಷದಂದು ನಾನು 8ನೇ ತರಗತಿ ಓದುತ್ತಿದ್ದೆ. ನಾನು ಉಪನ್ಯಾಸಕನಾಗಿ 1981 ರಂದು ನೇಮಕಗೊಂಡಿರುತ್ತೇನೆ. ನಮ್ಮ ಊರಿನಲ್ಲಿ ಪತ್ರಬರಹಗಾರರಾಗಿ ನಮ್ಮ ತಂದೆ ಚೌಡಯ್ಯ ಮಾತ್ರ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಪತ್ರ ಬರಹಗಾರರಾಗಿ ಪರವಾನಿಗೆ ಪಡೆದಿದ್ದರೂ ಕೂಡ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾನು ಮತ್ತು 1 ರಿಂದ 6ನೇ ಪ್ರತಿವಾದಿಗಳು ಮಕ್ಕಳು ಇರುತ್ತೇವೆ ಎಂದರೆ ಸರಿ. ನಿ.ಪಿ.2 ಆದ ಸಮಯದಲ್ಲಿ ನನ್ನ ವಿದ್ಯಾಭ್ಯಾಸ ಪೂರೈಸಿ ನಾನು ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ 1974ರಲ್ಲಿ ಮದುವೆಯಾಯಿತು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಮದುವೆ ಯಾವಾಗ

ನಡೆಯಿತು ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ಮದುವೆಯ ಖರ್ಚಿಗೋಸ್ಕರ ನಾನು ಮತ್ತು ನನ್ನ ತಂದೆ ಸೇರಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೆವು ಎಂದರೆ ನನಗೆ ಗೊತ್ತಿಲ್ಲ.

ನಿ.ಪಿ.4 ರಿಂದ 11ರಲ್ಲಿ ಕೊಂಡಪ್ಪ ಬಿನ್ ವೆಂಕಟಪ್ಪ ಹೆಸರು ದಾವಾ ಆಸ್ತಿಗೆ ನಮೂದಾಗಿದೆ ಎಂದರೆ ಸರಿ. ನನ್ನ ಮಗಳು ಪ್ರಿಯಾಂಕ ತಾಲ್ಲೂಕು ಕಛೇರಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ 2016–2020ರವರೆಗೆ ಕರ್ತವ್ಯ ನಿರ್ವಹಿಸಿದ ಕುರಿತು ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.14 ರಿಂದ 16 ನನ್ನ ಮಗಳು ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.14 ರಿಂದ 16ಗಳನ್ನು ಪಡೆಯಲು ಯಾವಾಗ ಅರ್ಜಿ ಸಲ್ಲಿಸಿದ್ದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.14 ರಿಂದ 16ಗಳನ್ನು ಅರ್ಜಿಯನ್ನು ಸಲ್ಲಿಸಿ ಪಡೆದಿದ್ದೇನೆ. ನಾನು ಸಲ್ಲಿಸಿದ ಅರ್ಜಿಯ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಒಂದೇ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಿ.ಪಿ.14 ಮತ್ತು 15ನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.16ರ ಪ್ರಕಾರ ವಾರಸುದಾರರಿಗೆ ಆಸ್ತಿಯನ್ನು ಪುನರ್ ಸ್ಥಾಪಿಸಲು ಉಪವಿಭಾಗಾಧಿಕಾರಿಗಳಿಗೆ ಮಾತ್ರ ಅಧಿಕಾರ ವ್ಯಾಪ್ತಿ ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ.16 ದರಕಾಸ್ತಿನಲ್ಲಿ ಎಸ್.ಸಿ. ಮತ್ತು ಎಸ್.ಟಿರವರಿಗೆ ಮಂಜೂರಾದ ಜಮೀನಿಗೆ ಮಾತ್ರ ಸಂಬಂಧಿಸಿದ್ದು, ಇನಾಮ್ತಿ ಜಮೀನುಗಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿ.ಪಿ.16ರಲ್ಲಿರುವ ಆದೇಶ ಈ ನ್ಯಾಯಾಲಯಕ್ಕೆ ಸಂಬಂಧಿಸಿದ್ದಲ್ಲ, ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.18ರ ಆದೇಶವನ್ನು ಪಡೆಯಲು ಯಾವಾಗ ಅರ್ಜಿ ಸಲ್ಲಿಸಿದ್ದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.18ರಂತೆ ಆದೇಶವನ್ನು ಯಾವಾಗ ಪಡೆದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.18ರ

ಪ್ರತಿಯನ್ನು ನಮ್ಮ ತಂದೆಯವರು ಪಡೆದಿದ್ದರು. ಸದರಿ ದಾಖಲೆ ಇದುವರೆಗೆ ನಮ್ಮ ಮನೆಯಲ್ಲೇ ಇತ್ತು ಎಂದರೆ ಸರಿ. ನಿ.ಪಿ.18ನ್ನು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಮತ್ತು ನನ್ನ ತಂದೆ ಈ ಹಿಂದೆಯೇ ಮಾರಾಟ ಮಾಡಿದ್ದು, ಈಗ ಅದನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**